■ ವಿಶಾಖ ಎನ್.



## ಹೊಸಬರು ಯಾರಿಗೂ ಬೇಕಿಲ್ಲ

# ರಿಚಾ

‘ಗರ್ಲ್ಸ್ ವಿಲ್ ಬಿ ಗರ್ಲ್ಸ್’ ಹಿಂದಿ ಸಿನಿಮಾ ನಿರ್ಮಿಸಿ, ಹೊಸಬರ ಬೆನ್ನುತಟ್ಟುವ ಉತ್ಸಾಹ ತೋರಿಸಿದ್ದ ನಟಿ ರಿಚಾ ಚೆಡ್ಡಾ, ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಹೊಸಬರನ್ನು ಹಾಕಿಕೊಂಡು ಸಿನಿಮಾ ಮಾಡುವುದು ಈ ಹೊತ್ತಿನ ಗಣಿತಕ್ಕೆ ಒಗ್ಗಿಬರುತ್ತಿಲ್ಲ ಎನ್ನುವುದು ಅವರಿಗೆ ಅರಿವಾಗಿದೆ.

ಈಗ ಮಾರುಕಟ್ಟೆ ಮೊದಲಿನಂತೆ ಇಲ್ಲ. ಅದನ್ನೇ ಅನುರಾಗ್ ಕಶ್ಯಪ್ ಅವರಂತಹ ನಿರ್ದೇಶಕರು ಹೇಳಿರುವುದು. ಅವರ ಹೇಳಿಕೆಯನ್ನು ರಿಚಾ ಕೂಡ ಅನುಮೋದಿಸುತ್ತಾರೆ.

ಸ್ಟಾರ್ ನಟರ ಚಿತ್ರಗಳು ಸೋತರೂ ಒಂದಿಷ್ಟು ವಹಿವಾಟು ನಡೆಸುವ ಆಲೋಚನೆ ಅನೇಕರಿಗೆ ಇದೆ. ಹೀಗಾಗಿ ಅವರ ಮೇಲೆಯೇ ಬಂಡವಾಳ ಹೂಡಲು ಮುಂದಾಗುತ್ತಾರೆ. ಸ್ಟಾರ್ ನಟರ ಸಿನಿಮಾಗಳ ಟಿಕೆಟ್ ದರ ಸಹಜವಾಗಿಯೇ ದೇಶದ ಉದ್ದಗಲ ಹೆಚ್ಚಾಗಿ ಇರುತ್ತದೆ. ದಕ್ಷಿಣ ಭಾರತದ ಸಿನಿಮಾಗಳಲ್ಲಿ ಪರಿಸ್ಥಿತಿ ಹೀಗೆ ಇಲ್ಲ. ಕಡಿಮೆ ಬಜೆಟ್ ಸಿನಿಮಾಗಳೂ ಅಲ್ಲಿ ತಯಾರಾಗಿ ಗೆಲ್ಲುತ್ತಿವೆ. ಟಿಕೆಟ್ ದರಗಳು ಕಡಿಮೆ ಇರುತ್ತವೆ. ಹೀಗಾಗಿ ಮಧ್ಯಮವರ್ಗದ ಜನರು ಚಿತ್ರಮಂದಿರಗಳಿಗೆ ಬರುತ್ತಾರೆ. ಚಿತ್ರದಲ್ಲಿ ಒಂದಿಷ್ಟು ದಂ ಇದ್ದರೂ ಗೆಲ್ಲಿಸಿಕೊಡುತ್ತಾರೆ ಎನ್ನುತ್ತಾರೆ ರಿಚಾ.

ಹೊಸಬರು ರೀಲ್ಸ್ ಮಾಡಿ, ಸಿನಿಮಾ ಪ್ರವೇಶ ಮಾಡುವ ಕನಸು ಕಾಣುತ್ತಾರೆ. ಅಂತಹವರನ್ನು ಚಿತ್ರರಂಗದವರು ಒಳಗೆ ಬಿಟ್ಟುಕೊಳ್ಳುವುದಿಲ್ಲ ಎಂಬ ಸತ್ಯವನ್ನೂ ಅವರು ಹೇಳುತ್ತಾರೆ. ■

# ಶಾಲಿನಿ ನೆನಪಿನ ಜೇಕು

ಶಾಲಿನಿ ಪಾಂಡೆ ನೆನಪಿರಬೇಕು. ‘ಅರ್ಜುನ್ ರೆಡ್ಡಿ’ ತೆಲುಗು ಸಿನಿಮಾ ನಾಯಕಿಯಾಗಿ ಅವರಿಗೆ ಒಳ್ಳೆಯ ಚಿಮ್ಮುಹಲಗೆ ಸಿಕ್ಕಿತು. ಅವರು ಅದರ ಮೇಲಿನಿಂದ ಸೀದಾ ಬಾಲಿವುಡ್ ಅಂಗಳಕ್ಕೆ ಜಿಗಿದರು. ಅಲ್ಲಿ ರಣವೀರ್ ಸಿಂಗ್ ನಾಯಕನಾಗಿದ್ದ ಚಿತ್ರಕ್ಕೆ ಬುಲಾವು ಬಂದಿತು. ಯಶ್ ರಾಜ್ ಬ್ಯಾನರ್ ಅಂದಮೇಲೆ ಕೇಳಬೇಕೆ, ಕನಸುಗಳನ್ನು ಈ ನಟಿ ಪೋಣಿಸಿಕೊಂಡರು. ‘ಜಯೇಶ್ ಭಾಯ್ ಜೋರದಾರ್’ ಹಿಂದಿ ಚಿತ್ರ ತೆರೆಕಂಡ ಕೆಲವೇ ದಿನಗಳಲ್ಲಿ ಕನಸುಗಳ ಮಣಿಹಾರ ತುಂಡಾಯಿತು.

ಆಗ ಶಾಲಿನಿ ಮನಸ್ಸು ಕದಡಿತು. ಯಾವ ಕರೆ ಬಂದರೂ ಉತ್ತರಿಸಲು ಮನಸ್ಸು ಹಿಂದೇಟು ಹಾಕುತ್ತಿತ್ತು. ಅದೊಂದು ಸಿನಿಮಾ ಗೆದ್ದಿದ್ದರೆ ತಮ್ಮ ಭವಿಷ್ಯ ಚೆನ್ನಾಗಿರುತ್ತಿತ್ತಲ್ಲ ಎಂದು ಮನಸ್ಸು ಪದೇ ಪದೇ ಚುಚ್ಚಿತು. ಸ್ವಲ್ಪ ದಿನ ಏನು ಮಾಡಲೂ ದಿಕ್ಕು ತೋಚಲಿಲ್ಲ. ಕ್ರಮೇಣ ತಮ್ಮನ್ನು ತಾವೇ ಸಂತೈಸಿಕೊಂಡರು. ‘ಸೋಲೇ ಗೆಲುವಿನ ಸೋಪಾನ’ ಎಂದೆಲ್ಲ ಸಮಾಧಾನ ಹೇಳಿಕೊಂಡರು. ‘ಮಹಾರಾಜ್’ ಹಿಂದಿ ಚಿತ್ರದಲ್ಲಿ ಒಂದು ಪಾತ್ರ ಸಿಕ್ಕಿತು. ಆ ಪಾತ್ರವೂ ಕ್ಲಿಕ್ ಆಗಲಿಲ್ಲ. ಶಾರ್ವರಿ ಹಾಗೂ ಜುನೈದ್ ಖಾನ್ ಪಾತ್ರಗಳು ಆವರಿಸಿಕೊಂಡಿದ್ದ ಚಿತ್ರ ಅದು. ಅಲ್ಲಿಂದಾಚೆಗೆ ಶಾಲಿನಿ ತಮಗೆ ತಾವೇ ವಿಮರ್ಶಕಿ ಆದರು.

ಸಿನಿಮಾ ಗೆಲ್ಲುವುದು, ಸೋಲುವುದು ಇದ್ದಿದ್ದೇ. ಆದರೆ, ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಕೊರಗುತ್ತಾ ಕೂರದೆ, ಮುಂದೆ ನುಗ್ಗಬೇಕು ಎಂದು ಸಂಕಲ್ಪ ಮಾಡಿದರು.

ಅಧ್ಯಾತ್ಮ ಮಾತಾಡುವ ರೀತಿ ಅವರ ಧಾಟಿ ಕೇಳಿಸುವ ಹೊತ್ತಿಗೇ ಹಳೆಯ ಕಹಿ ನೆನಪನ್ನೂ ಅರುಹಿದರು. ಅವರು ವ್ಯಾನಿಟಿ ವ್ಯಾನ್‌ನಲ್ಲಿ ಬಟ್ಟೆ ಬದಲಿಸುತ್ತಾ ಇದ್ದರು. ಅದೇ ಹೊತ್ತಿಗೆ ತೆಲುಗು ಚಿತ್ರ ನಿರ್ದೇಶಕರೊಬ್ಬರು ಬಾಗಿಲು ತಟ್ಟದೆಯೇ ಒಳಪ್ರವೇಶಿಸಿದ್ದರು. ಆಗ ಶಾಲಿನಿ ಅವರಿಗೆ ಮಾತೇ ಹೊರಡಲಿಲ್ಲ. ಅವರನ್ನು ದುರುಗುಟ್ಟಿ ನೋಡಿದ್ದರು. ಇಂತಹ ಅಸೂಕ್ಷ್ಮ ಜನರೂ ಇದ್ದಾರೆ ಎನ್ನುವ ಜ್ಞಾನೋದಯ ಆ ದಿನ ಅವರಿಗೆ ಆಯಿತು. ಪುರುಷರಿಂದ ಎಷ್ಟು ಅಂತರದಲ್ಲಿ ಇರಬೇಕು ಎಂದು ಆಗಿನಿಂದ ತಮಗೆ ತಾವೇ ಒಂದು ಗೆರೆ ಎಳೆದುಕೊಂಡಿದ್ದಾಗಿ ಶಾಲಿನಿ ಹೇಳಿಕೊಂಡರು. ‘ಡಬ್ಬಾ ಕಾರ್ಟೆಲ್’ ಕ್ರೈಂ ಡ್ರಾಮಾ ವೆಬ್ ಸರಣಿಯಲ್ಲಿ ನಟಿಸಿದ ಶಾಲಿನಿ, ಈಗ ಧನುಷ್ ನಿರ್ದೇಶನದ ‘ಇಡ್ಲಿ ಕಡಾಯ್’ ತಮಿಳು ಚಿತ್ರದ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ■

